ರೂ. ಲಕ್ಷಗಳಲ್ಲಿ

ಕ್ರ. ಸಂ.	ಜಿಲ್ಲೆ	ವರ್ಷ	ಕಾಮಗಾರಿಗಳ ಸಂಖ್ಯೆ	ಕಾಮಗಾರಿಗಳ ಮೊತ್ತ
1.	ದಕ್ಷಿಣ ಕನ್ನಡ	2003–04	11	790.00
2.	ಉಡುಪಿ	2003–04	4	300.00

ಇ) ಅನುಸರಿಸಲಾಗುತ್ತಿದೆ.

ಈ) ಜನಪ್ರತಿನಿಧಿಗಳ ಕೋರಿಕೆಯ ಮೇರೆಗೆ ಅನುದಾನದ ಲಭ್ಯತೆಗೆ ಅನುಗುಣವಾಗಿ ಹಂತಹಂತವಾಗಿ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿಯೂ ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪನೆಗಳನ್ನು ಸಲ್ಲಿಸಿ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗುತ್ತದೆ.

629(483) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿನ ಯಾವ ಯಾವ ಬಡಾವಣೆಗಳ ಯಾವ ಯಾವ ರಸ್ತೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇದೆ;

ಆ) ಈ ಸಮಸ್ಯೆ ಬಗೆಹರಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದು;

ಇ) ಅದಕ್ಕೆ ಎಷ್ಟು ವೆಚ್ಚ ತಗಲುವುದು;

ಈ) ಈ ಸಮಸ್ಯೆ ಬಗೆಹರಿಸಲು ಸರ್ಕಾರ ಎಷ್ಟು ಸಮಯ ತೆಗೆದುಕೊಳ್ಳುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೈಸೂರು ನಗರದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ರಸ್ತೆಗಳಲ್ಲಿ ಅಥವಾ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇರುವುದಿಲ್ಲ.

ಆ) ಮೇಲೆ ಹೇಳಿರುವಂತೆ ವೋಲ್ಟೇಜ್ ಸಮಸ್ಯೆ ಇಲ್ಲದಿದ್ದರೂ. ಹೆಚ್ಚುತ್ತಿರುವ ಬೇಡಿಕೆ ಪೂರೈಸಲು ಮೈಸೂರು ನಗರದಲ್ಲಿ. ವಿತರಣಾ ಜಾಲವನ್ನು ಇನ್ನಷ್ಟು ಸುಧಾರಣೆಗೊಳಿಸಲು ಎ.ಪಿ.ಡಿ.ಆರ್.ಪಿ. ಯೋಜನೆಯಡಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ಹೊಸ 11 ಕೆ.ವಿ. ಮಾರ್ಗಗಳ ನಿರ್ಮಾಣ. ಹೊಸ ಪರಿವರ್ತಕಗಳ ಅಳವಡಿಕೆ. ಕಡಿಮೆ ಸಾಮರ್ಥ್ಯದ ಹಳೆಯ ವಾಹಕವನ್ನು ಹೆಚ್ಚು ಸಾಮರ್ಥ್ಯದ ವಾಹಕಗಳಿಂದ ಬದಲಾಯಿಸುವಿಕೆ ಮತ್ತು ಇತರೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

ಇ) ಈ ಯೋಜನೆಗೆ ತಗಲುವ ವೆಚ್ಚ 33.06 ಕೋಟಿ ರೂ.ಗಳು.

ಈ) ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು, ಮೇಲ್ಕಂಡ ಕೆಲಸಗಳನ್ನು ನಿರಂತರವಾಗಿ ತೆಗೆದುಕೊಳ್ಳಲಾಗುತ್ತಿದೆ. ಆದರೆ, ಎ.ಪಿ.ಡಿ.ಆರ್.ಪಿ. ಯೋಜನೆಯಡಿಯಲ್ಲಿರುವ ಕಾಮಗಾರಿಗಳನ್ನು ಒಂದು ವರ್ಷದೊಳಗೆ ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ.